## ಲಾಂಗ್ ಸ್ಟಾಪ್ ಗಾಡಿ!



ಹೀಗೆ ಮೊನ್ನೆ ನಮ್ಮ ಹಳ್ಳಿಯಲ್ಲೊಂದು ಸಮಾರಂಭಕ್ಕೆ ಹೋಗಿದ್ದಾಗ ನೆಂಟರಿಷ್ಟರೆಲ್ಲ ಒಬ್ಬೊಬ್ಬರಾಗಿ ಬರುತ್ತಿದ್ದರು. ಮೊದಲು ಬಂದವರು ಆಗಾಗ ಬರುತ್ತಿದ್ದವರನ್ನು, 'ಈಗ ಬಂದಿರಾ? ಹೇಗೆ ಬಂದಿರಿ, ತಿಂಡಿ ತಿನ್ನಿ' ಎಂದು ವಿಚಾರಿಸಿಕೊಳ್ಳುತ್ತಿದ್ದರು. ಹೀಗಿರುವಾಗ ಬೆಂಗಳೂರಿನಿಂದ ಬಂದವರೊಬ್ಬರನ್ನು, 'ಈಗ ಬಂದಿರಾ, ಮಗಳು ಬರಲಿಲ್ಲವಾ' ಎಂದು ಕೇಳಿದರು.

ಆಗ ಅವರು 'ಅಯ್ಯೋ ನಾನು ಚನ್ನರಾಯಪಟ್ಟಣದಲ್ಲಿ ಇಳಿದು ಮಗಳನ್ನ ಕರೆದುಕೊಂಡು ಬರೋಣ ಅಂತಿದ್ದೆ. ನೋಡಿದ್ರೆ ನಾನು ಹತ್ತಿದ್ದು 'ಲಾಂಗ್ ಸ್ಟಾಪ್' ಗಾಡಿ. ಚನ್ನರಾಯಪಟ್ಟಣದಲ್ಲಿ ನಿಲ್ಲಿಸಲಿಲ್ಲ. ಲಾಂಗ್ ಸ್ಟಾಪ್ ಗಾಡಿ ತಿಂಡಿಗೆ ಯಾವ್ದೋ ಹೊಟ್ಲು ಮುಂದೆ ನಿಲ್ಸಿದ್ ಬುಟ್ರೆ ಎಲ್ಲೂ ನಿಲ್ಲಿಸ್ಲಿಲ್ಲ. ಯಾಕಂದ್ರೆ ಅದು 'ಲಾಂಗ್ ಸ್ಟಾಪ್ ಗಾಡಿ ಅಂತಲ್ಲ' ಎಂದು ಅವರು ಮತ್ತೆ ಮತ್ತೆ ಹೇಳುವಾಗ ನಾವೂ ಕೂಡ ದನಿಗೂಡಿಸಿ, 'ಹುಂ ಆಂಟಿ ಲಾಂಗ್ ಸ್ಟಾಪ್ ಗಾಡಿನ ಎಲ್ಲೂ ನಿಲ್ಸಲ್ಲಾ ಬಿಡಿ!' ಎಂದೆವು. ಬಂದ ನಗುವನ್ನು ತಡೆಯುತ್ತಾ. 'ನಾನ್ ಸ್ಟಾಪ್' ಗಾಡಿ ಅವರ ಬಾಯಲ್ಲಿ 'ಲಾಂಗ್ ಸ್ಟಾಪ್' ಆಗಿತ್ತು.

**ರಾಜೇಶ್ವರಿ ಹುಲ್ಲೇನಹಳ್ಳಿ**

---




## ಪ್ರಬಂಧ ನಿಮ್ಮದೇ

ಎಮ್ಮೆ ಮೇಲಿನ ಪ್ರಬಂಧಕ್ಕೆ ಪಕ್ಕದ ಮನೆ ಹುಡುಗನಿಗೆ ಮೊದಲ ಬಹುಮಾನ ದೊರೆಯಿತು. ತಿಮ್ಮನ ಮಗನಿಗೆ ಏನೂ ಸಿಗಲಿಲ್ಲ.

ತಿಮ್ಮ ಮಗನನ್ನು ತರಾಟೆಗೆ ತೆಗೆದುಕೊಂಡು, 'ಈಗಲಾದರೂ ಅರ್ಥವಾಯಿತಾ? ಹಿರಿಯರ ಮಾರ್ಗದರ್ಶನ ಬೇಕು ಅನ್ನುವುದು ಇದಕ್ಕೆ. ನನ್ನ ಬಳಿ ಕೇಳಿಕೊಂಡು ಪ್ರಬಂಧ ಬರೆದಿದ್ದರೆ ನಿನಗೇ ಮೊದಲ ಬಹುಮಾನ ಬರುತ್ತಿತ್ತು' ಎಂದು ಕಿವಿ ಹಿಂಡಿದ. ಆಗ ಮಗ 'ಇಲ್ಲಪ್ಪ, ನಾನು ನಿಮ್ಮ ಹಳೆಯ ಪ್ರಬಂಧ ನೋಡಿಯೇ ಬರೆದದ್ದು. ನಾನು ಸ್ವಂತ ಬರೆದ ಪ್ರಬಂಧವನ್ನು ಪಕ್ಕದ ಮನೆ ಹುಡುಗನಿಗೆ ಕೊಟ್ಟಿದ್ದೆ' ಎಂದಾಗ, ತಿಮ್ಮನಿಗೆ ಏನು ಹೇಳಬೇಕೋ ತಿಳಿಯದಾಯಿತು.

**ಪ. ರಾಮಕೃಷ್ಣ ಶಾಸ್ತ್ರಿ**